ಬಾಯಿಬಾಯಿ ಬಿಡುತ್ತಿದ್ದ.

ಮೆರವಣಿಗೆ ಕೇರಿಕೇರಿಗಳಲ್ಲಿ ಹಾಯ್ದು ಕುರುಬಗೇರಿಗೆ ಬಂದಾಗ ಅಲ್ಲಿದ್ದ ಜಲ್ಲಿ ಕಲ್ಲು ಗುಡ್ಡೆ ಹುಡುಗರನ್ನು ಆಕರ್ಷಿಸಿತು. ಕಲ್ಲಿನ ಬೀರಾಟದಲ್ಲಿ ಒಂದು ಮೂಗನ ಬಾಯಿಗೆ ತಗಲಿ ಹುಳುಕು ಹಲ್ಲೊಂದು ಮುರಿದು ಬಿದ್ದು ಬಾಯಿಂದ ರಕ್ತ ಸೋರಿತು.

'ಹಾಗಾಗಬೇಕು! ಹಲ್ಲುಮುರೀಬೇಕು! ಜೊಲ್ಲು ಸುರೀಬೇಕು!' ಹುಡುಗರು ಪರಿಚಿತ ಪಂಗ್ತಿಯನ್ನು ಹಾಡಿ ಕುಣಿದಾಡಿದರು.

ಸೂಳೆರಂಗವ್ವನ ಮೂಲೆ ಮನೆಯ ಮುಂದೆ ಬೆರಣಿಗಾಗಿ ಹಾಕಿದ್ದ ತೊಪ್ಪೆ ಗುಡ್ಡೆ ಕಂಡಾಗ ಜನರಿಗೆ ಪರಮಾನಂದವಾಯಿತು. ಹಿಡಿಹಿಡಿಯಲ್ಲಿ ತೆಗೆದುಕೊಂಡು ಮೂಗನಿಗೆ ಹೊಡೆದದ್ದೂ ಹೊಡೆದದ್ದೇ. ಎಷ್ಟೋ ಗುರಿತಪ್ಪಿ ಜನರೆಲ್ಲರ ಮೇಲೂ ಬಿದ್ದದ್ದೂ ಬಿದ್ದದ್ದೇ. ಕ್ಷಣಕಾಲದಲ್ಲಿ ತೊಪ್ಪೆಗುಡ್ಡೆ ನಿರ್ನಾಮವಾಯಿತು.

ಮೆರವಣಿಗೆ ಮುಂದೆ ಮುಂದೆ ನಡೆದು ಎಲ್ಲ ಕೇರಿಗಳೂ ಮುಗಿದು ಮತ್ತೆ ದೇವಸ್ಥಾನವನ್ನು ತಲುಪುವ ಹೊತ್ತಿಗೆ ಸೂರ್ಯನೆತ್ತಿಯಿಂದ ಕೆಳಗೆ ಇಳಿಯಲಾರಂಭಿಸಿದ್ದ. ಅಷ್ಟಿಷ್ಟು ಜನ ಆಗಲೇ ಮೆರವಣಿಗೆಯಿಂದ ಕಳಚಿಕೊಂಡು ಮನೆಗಳಿಗೆ ಹೋಗಿದ್ದರು.

'ಇನ್ನು ಆಯ್ತು ಮೆರವಣಿಗೆ. ಪಾಪ, ನೀವೆಲ್ಲ ತುಂಬ ದಣಿದಿದ್ದೀರಿ. ಹಸಿವು ಬಾಯಾರಿಕೆ ಆಗಿರಬೇಕು. ನಿಮ್ಮ ನಿಮ್ಮ ಮನೆಗಳಿಗೆ ಹೋಗಿ ಊಟ ಗೀಟ ಮಾಡಿ ಆರಾಮ ತಗೊಳ್ಳಿ. ನಾವೂ ಹೋಗ್ತೀವಿ' ಸಾಹುಕಾರರು ಉಳಿದ ಜನರಿಗೆ ಹೇಳಿದರು.

'ಕಳ್ಳನ್ನ ಏನ್ ಮಾಡ್ತೀರಿ ಸಾವ್ಕಾರ್ರೆ?' ಯಾರೋ ಕೇಳಿದ.

'ಏನು ಮಾಡೋದು. ಯಥಾಸ್ಥಿತಿ ಕಂಬಕ್ಕೆ ಬಿಗಿದರಾಯ್ತು. ಹಾಗೇ ಇರಲಿ ಅನ್ನ ನೀರು ಇಲ್ಲದೆ ಸಂಜೆವರೆಗೂ, ಆಮೇಲೆ ನೋಡೋಣ ಏನು ಮಾಡಬೇಕು ಅಂತ' ಸಾಹುಕಾರರು ಉತ್ತರಿಸಿದರು.

'ಹಂಗೇ ಸರಿ, ಹಂಗೇ ಸರಿ.'

'ಬಿದ್ದಿರ್ಲಿ ಕಳ್‌ಬಡ್ಡಿ ಹೈದ.'

'ಹ್ವಾ, ಹ್ವಾ.'

'ಬನ್ರಪ್ಪೋ ನಡೀರಿ, ವಸಿ ಹಿಟ್ಟು ಸೊಪ್ಪು ನೋಡಾನ, ಆಮ್ಯಾಲೆ ಬಂದ್ರಾತು. ಇಲ್ಲೆ ಇರ್ತಾನಲ್ಲ ಅವ್ನು, ಎಲ್ಲೋದಾನು'.

ಜನರು ಅಲ್ಲಿಂದ ಕಾಲ್ತೆಗೆಯಲಾರಂಭಿಸಿದರು. ಸಾಹುಕಾರರ ಆಜ್ಞೆಯಂತೆ ಅವರ ಆಳುಗಳು ಮೂಗನನ್ನು ಮತ್ತೆ ಕಂಬಕ್ಕೆ ಬಿಗಿದ ಮೇಲೆ, ಪ್ರಮುಖರು ಮಾತನಾಡಿಕೊಳ್ಳುತ್ತ ಮನೆಗಳಿಗೆ ಹೊರಟರು.

## 3

ಸಂಜೆ ಐದು ಗಂಟೆಯ ಹೊತ್ತಿನಲ್ಲಿ ಸಾಹುಕಾರರ ಮನೆ ಜಗಲಿಯ ಮೇಲೆ ಗ್ರಾಮ ಪ್ರಮುಖರು ಸೇರಿ ಚರ್ಚಿಸುತ್ತಿದ್ದರು. ವಿಷಯ ನವನೀತ ಗೋಪಾಲ ಕೃಷ್ಣಸ್ವಾಮಿಯದು. ಮೂಗನ ಪ್ರವೇಶದಿಂದ ದೇವಸ್ಥಾನದ ಗರ್ಭಗುಡಿಗೆ, ಅವನ ಸ್ಪರ್ಶದಿಂದ ದೇವರಿಗೆ ಮೈಲಿಗೆಯಾಗಿದ್ದುದರಿಂದ ಶುದ್ಧೀಕರಣದ ವಿಚಾರ ಬಂದಿತು. ಇತರರು ಶುದ್ಧಿ ಸಂಸ್ಕಾರ ಸಾಕಲ್ಲವೆ ಎಂದು ಪೂಜಾರಪ್ಪನನ್ನು ಕೇಳಿದಾಗ ಆತ ಅಷ್ಟರಲ್ಲೇ ಹೇಗಾಗುತ್ತೆ? ದೇವರಿಗೆ ಮೈಲಿಗೆಯಾಗಿಬಿಟ್ಟ ಮೇಲೆ ಅದು ಬರಿ ಕಲ್ಲಿಗೆ ಸಮಾನ. ಶಾಸ್ತ್ರೀಯ ಶುದ್ಧ ಸಂಸ್ಕಾರದೊಂದಿಗೆ ಪುನಃ ಹಿಂದೆ ಆಗಿದ್ದಂತೆ ಮೂರ್ತಿಯ ಪ್ರಾಣಪ್ರತಿಷ್ಠಾಪನೆ ಸಕಲ ಯಜ್ಞ ಶಾಸ್ತ್ರ ಸಮಾರಂಭ ಅನ್ನದಾನ, ವಸ್ತ್ರದಾನ,